# ಜೈರಾ ಮುಂದೇನು?

‘ಬಾಲಿವುಡ್‌ಗೆ ಗುಡ್‌ಬೈ ಹೇಳಲು ನಿರ್ಧರಿಸಿದ್ದೇನೆ’ ಎನ್ನುವ ಜೈರಾ ವಾಸಿಂ ಹೇಳಿಕೆ ಬಾಲಿವುಡ್‌ನಲ್ಲಿ ಬಹುದೊಡ್ಡ ಸಂಚಲನ ಉಂಟುಮಾಡಿತು. ಅಮೀರ್‌ಖಾನ್ ಪಾಳೆಯದ ‘ದಂಗಲ್’ ಸಿನಿಮಾದಲ್ಲಿ ಕುಸ್ತಿಪಟುವಿನ ಪಾತ್ರದಲ್ಲಿ ಮಿಂಚಿದ ಕಾಶ್ಮೀರ ಸುಂದರಿ ಜೈರಾ, ಬಳಿಕ ಅಮೀರ್‌ಖಾನ್ ಅಭಿನಯದ ‘ಸೀಕ್ರೆಟ್ ಸೂಪರ್‌ಸ್ಟಾರ್’ ಚಿತ್ರದಲ್ಲಿ ಹೀರೊಯಿನ್ ಆಗಿ ಎಲ್ಲರ ಮನ ಗೆದ್ದಿದ್ದಳು. ಈಕೆ ನಟಿಸಿದ ‘ದಿ ಸ್ಕೈ ಈಸ್ ಪಿಂಕ್’ ಅಕ್ಟೋಬರ್ ತಿಂಗಳಲ್ಲಿ ಬಿಡುಗಡೆಯಾಗಲಿದೆ. ನಟಿಸಿದ್ದು ಮೂರೇ ಚಿತ್ರಗಳಾದರೂ, ಮೊದಲ ಎರಡು ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಗಳಿಕೆಯ ದಾಖಲೆ ನಿರ್ಮಿಸಿದ್ದು ಜೈರಾಗೆ ಸಾಕಷ್ಟು ಬೇಡಿಕೆ ಸೃಷ್ಟಿಸಿತ್ತು.

‘ಐದು ವರ್ಷದ ಹಿಂದೆ ಬಾಲಿವುಡ್ ಪ್ರವೇಶಿಸಿದ ಬಳಿಕ ನನ್ನ ಜೀವನದಲ್ಲಿ ಮಹತ್ತರ ಬದಲಾವಣೆ ಸಂಭವಿಸಿತು. ವ್ಯಾಪಕ ಜನಪ್ರಿಯತೆಯ ಬಾಗಿಲು ತೆರೆಯಿತು. ಆದರೆ ಈ ಐದು ವರ್ಷಗಳಲ್ಲಿ ನಾನು ಸಂತೋಷವಾಗಿಯೇನೂ ಇಲ್ಲ. ಸಿನಿಮಾದಲ್ಲಿ ತೊಡಗಿರುವುದರಿಂದ ನನ್ನ ಧಾರ್ಮಿಕ ವಿಶ್ವಾಸಕ್ಕೆ ಕುಂದುಂಟಾಗಿದೆ. ಧರ್ಮದ ಜೊತೆಗಿನ ನನ್ನ ಸಂಬಂಧ ಬೆದರಿಕೆಗೆ ಒಳಗಾಗಿದೆ. ಹಾಗಾಗಿ ಬಾಲಿವುಡ್‌ನಿಂದ ದೂರವಾಗಲು ನಿರ್ಧರಿಸಿದ್ದೇನೆ’ ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಪತ್ರ ಬರೆದು ಜೈರಾ ವಿದಾಯ ಹೇಳಿದ್ದಾಳೆ.

ಈಕೆಯ ಹೇಳಿಕೆಗೆ ರವೀನಾ ಟಂಡನ್, ಅನುಪಮ್ ಖೇರ್ ಮತ್ತಿತರ ತಾರೆಯರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಧಾರ್ಮಿಕ ಮೂಲಭೂತವಾದಿಗಳ ಒತ್ತಡ ತಾಳಲಾಗದೆ ಜೈರಾ ಚಿತ್ರರಂಗ ತ್ಯಜಿಸಿದ್ದು ದುರದೃಷ್ಟಕರ ಎನ್ನುವುದು ರವೀನಾ ಹೇಳಿಕೆ. ಆದರೆ ಜೈರಾಳನ್ನು ಹತ್ತಿರದಿಂದ ಬಲ್ಲ ಅಮೀರ್‌ಖಾನ್, ‘ದಂಗಲ್’ ನಿರ್ದೇಶಕ ನಿತೀಶ್ ತಿವಾರಿ, ‘ಆರ್ಟಿಕಲ್ 15’ ನಿರ್ದೇಶಕ ಅನುಭವ ಸಿನ್ಹಾ, ನಟಿ ತನುಶ್ರೀ ದತ್ತಾ ಮುಂತಾದವರು ಜೈರಾ ನಿರ್ಧಾರಕ್ಕೆ ಬೆಂಬಲ ಸೂಚಿಸಿದ್ದಾರೆ. ‘ಆಕೆಯ ವೈಯಕ್ತಿಕ ವಿಚಾರವಿದು. ಆಕೆ ತನ್ನದೇ ಆದ ಧಾರ್ಮಿಕ ವಿಚಾರಗಳನ್ನು ಹೊಂದಿದ್ದರೆ ಈ ತೀರ್ಮಾನಕ್ಕೆ ಬೆಂಬಲ ನೀಡೋಣ’ ಎಂದಿದ್ದಾರೆ. ‘ಆಕೆಯನ್ನು ಆಕೆಯಷ್ಟಕ್ಕೇ ಬಿಟ್ಟುಬಿಡಿ’ ಎಂದು ಅಮೀರ್ ಮನವಿ ಮಾಡಿದ್ದಾರೆ.

ಕೆಲವು ವಾರಗಳ ಹಿಂದೆ ಜೈರಾ, ಜಮ್ಮು–ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಅವರನ್ನು ಭೇಟಿಯಾಗಿದ್ದರು. ಈ ಭೇಟಿಯ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಟೀಕೆಗಳು ಕೇಳಿಬಂದಿದ್ದವು. ಅದರಿಂದ ಮನನೊಂದ ಜೈರಾ ‘ಈ ಭೇಟಿಯಿಂದ ಯಾರಿಗಾದರೂ ಮನಸ್ಸಿಗೆ ನೋವಾಗಿದ್ದರೆ ನನ್ನನ್ನು ಕ್ಷಮಿಸಿ’ ಎಂದು ಮನವಿ ಮಾಡಿದ್ದಳು.



‘ಕಾಶ್ಮೀರದ ಯುವಜನರು ನನ್ನನ್ನು ರೋಲ್ ಮಾಡೆಲ್ ಎಂದು ಭಾವಿಸಿದ್ದಾರೆ. ನಾನು ಯಾರಿಗೂ ರೋಲ್ ಮಾಡೆಲ್ ಅಲ್ಲ. ನನ್ನನ್ನು ಫಾಲೋ ಮಾಡಬೇಡಿ’ ಎಂದೂ ಜೈರಾ ಹೇಳಿರುವುದು ಆಕೆಯ ಅಭಿಮಾನಿಗಳಲ್ಲಿ ತೀವ್ರ ನಿರಾಶೆ ಮತ್ತು ಆಕ್ರೋಶ ಮೂಡಿಸಿದೆ.

ಈ ಮಧ್ಯೆ ಜೈರಾ, ಕಲರ್ಸ್ ಟಿವಿಯ ‘ಬಿಗ್ ಬಾಸ್ ಸೀಸನ್ 13’ರಲ್ಲಿ ಭಾಗವಹಿಸುವ ಸುದ್ದಿ ಹಬ್ಬಿದೆ. ಸಲ್ಮಾನ್ ಖಾನ್ ನಡೆಸಿಕೊಡುತ್ತಿರುವ ಈ ಜನಪ್ರಿಯ ರಿಯಾಲಿಟಿ ಷೋನಲ್ಲಿ ಜೈರಾ ಭಾಗವಹಿಸಿದರೆ ಆ ಷೋ ಬಗ್ಗೆ ಜನರ ಕುತೂಹಲ ಇನ್ನಷ್ಟು ಹೆಚ್ಚಲಿದೆ ಎನ್ನುವುದಂತೂ ಗ್ಯಾರಂಟಿ. ಸೆ.29ರಿಂದ ಈ ಷೋ ಆರಂಭವಾಗಲಿದೆ. ಏನಾಗುತ್ತದೋ ಕಾದು ನೋಡಬೇಕು.


ಲೇಡೀಸ್ ಪ್ರಾಬ್ಲಂ...?
AN ISO9001:2015 COMPANY
CARAM®
Pure Ayurveda

ಇನ್ನು ಎಲ್ಲಾ ಟೈಮ್ ಸರಿಯಾಗಿ ನಡೆಯಲಿ...
ಪ್ರತಿ ತಿಂಗಳು ಹೆಣ್ಣು ಮಕ್ಕಳು
ಆ ದಿನಗಳ ಕಷ್ಟವನ್ನು ಸಹಿಸಬೇಕಾಗಿಲ್ಲ....
ಆರೋಗ್ಯದ ಅನಿಯಮಿತತೆಗೆ ಕಡಿವಾಣ
ಇನ್ನು ಎಲ್ಲಾ ಸರಿಯಾಗುತ್ತದೆ.
ಸತತ 3 ತಿಂಗಳ ಅಸಾವರಿ ಕಲ್ಪ ಸೇವನೆಯಿಂದ
ಆ ತೊಂದರೆಗಳನ್ನು ಮೂಲದಿಂದ ಸರಿಪಡಿಸಬಹುದು.
ಸಾವಿರಾರು ವರ್ಷಗಳಿಂದ ಭಾರತೀಯ ಋಷಿಮುನಿಗಳು,
ವೈದ್ಯರು ತಿಳಿಸಿದ 44 ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ
ಬಹು ಸುರಕ್ಷಿತ ಪರಿಣಾಮಕಾರಿ ಕಲ್ಪ.



ಸ್ತ್ರೀಯರ ಪಾಲಿನ ಆರೋಗ್ಯದ ಕಲ್ಪವೃಕ್ಷ
ಲೇಡೀಸ್ ಸ್ಪೆಷಲ್ ಟಾನಿಕ್
ಅಸಾವರಿ
ಆಯುರ್ವೇದ ಕಲ್ಪ




11ರಿಂದ 60ರ ವಯಸ್ಸಿನ
ಸ್ತ್ರೀಯರಲ್ಲಿ ಆಗುವ
ಬಹುತೇಕ ಆರೋಗ್ಯದ
ಸಮಸ್ಯೆಗಳಿಗೆ
ಸುರಕ್ಷಿತ ಉಪಾಯ.
ಎಲ್ಲಾ ಮೆಡಿಕಲ್ ಹಾಗೂ ಆಯುರ್ವೇದಿಕ್ ಅಂಗಡಿಗಳಲ್ಲಿ ಲಭ್ಯ
Cust. Care : 99808 10229, 94488 23007